ಕರ್ನಾಟಕ ಸರ್ಕಾರ
(ಮೀನುಗಾರಿಕೆ ಇಲಾಖೆ)
ಮೀನುಗಾರಿಕೆ ನಿರ್ದೇಶನಾಲಯ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿ.ವಿ.ಕೇಂದ್ರ,
ಡಾ: ಅಂಬೇಡ್ಕರ್ ವೀಧಿ,ಬೆಂಗಳೂರು-01 ದೂರವಾಣಿ ಸಂಖ್ಯೆ: 080-22864681,
ಪ್ಯಾಕ್ಸ್: 080-22864619, ಇಮೇಲ್: dfkarnataka@rediffmail.com.

---

ಸಂಖ್ಯೆ/DOF-TECH0INL/2022;E-761217 ದಿನಾಂಕ:03/10/2022

## ಸುತ್ತೋಲೆ

**ವಿಷಯ:** ಗ್ರಾಮ ಪಂಚಾಯಿತಿ ಕೆರೆಗಳಲ್ಲಿ ಬಲಿತ ಬಿತ್ತನೆ ಮೀನುಮರಿಗಳನ್ನು ಉಚಿತವಾಗಿ ದಾಸ್ತಾನು ಮಾಡುವ ಯೋಜನೆಯನ್ನು ಶಿಘ್ರವಾಗಿ ಅನುಷ್ಟಾನಗೊಳಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ/ಪಸಂಮೀ ಇ-117 ಮೀಇಯೋ 2022,ಬೆಂಗಳೂರು, ದಿನಾಂಕ:07-04-2022
2. ಈ ಕಛೇರಿಯ ಪತ್ರ ಸಮ ಸಂಖ್ಯೆ ದಿನಾಂಕ: 06-08-2022 ಮತ್ತು 22-09-2022

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (01)ರ ಸರ್ಕಾರದ ಆದೇಶದಲ್ಲಿ 2022-23ನೇ ಸಾಲಿನಲ್ಲಿ ರಾಜ್ಯದ ಆಯ್ದ ಗ್ರಾಮ ಪಂಚಾಯಿತಿ ಕೆರೆಗಳಲ್ಲಿ ಉಚಿತವಾಗಿ ಬಲಿತ ಬಿತ್ತನೆ ಮೀನುಮರಿಗಳನ್ನು ದಾಸ್ತಾನುಮಾಡಲು ಯೋಜನೆಯನ್ನು ಮತ್ತು ಷರತ್ತು ಮತ್ತು ನಿಬಂದನೆಗಳನ್ನು ಅನುಮೋದಿಸಿ ಆದೇಶಿಸಲಾಗಿರುತ್ತದೆ.

ಅದರಂತೆ ಉಲ್ಲೇಖ (02)ರ ಪತ್ರಗಳಲ್ಲಿ ಈ ಕಛೇರಿಯಿಂದ ಮೀನುಮರಿಗಳನ್ನು ಸರಬರಾಜು ಮಾಡಲು ಆಸಕ್ತಿ ವ್ಯಕ್ತಪಡಿಸಿ ಎಲ್ಲಾ ವಲಯದ ಜಂಟಿ ನಿರ್ದೇಶಕರುಗಳು ಸಲ್ಲಿಸಿದ ಪ್ರಸ್ತಾವನೆಗಳನ್ನು ಪರಿಗಣಿಸಿ empaneled list ಅನ್ನು ವಲಯವಾರು ನೀಡಲಾಗಿರುತ್ತದೆ. ಈ ಬಗ್ಗೆ ದಿನಾಂಕ: 29-09-2022 ರಂದು ಸದರಿ ಯೋಜನೆಯು ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು ಸದರಿ ಯೊಜನೆಯನ್ನು ಶೀಘ್ರವಾಗಿ ಅನುಷ್ಟಾನಗೊಳಿಸುವ ನಿಟ್ಟನಲ್ಲಿ ಸೂಚನೆಯನ್ನು ನೀಡುವ ಸಲುವಾಗಿ ಮೀನುಗಾರಿಕೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಎಲ್ಲಾ ವಲಯ ಮಟ್ಟದ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯನ್ನು ಕರೆಯಲಾಗಿತ್ತು. ಸದರಿ ಸಭೆಯಲ್ಲಿ ಚರ್ಚಿಸಿದಂತೆ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ವಲಯ ಮಟ್ಟದ ಅಧಿಕಾರಿಗಳು ಸದರಿ ಯೊಜನೆಯು ಇದೇ ಮೊದಲ ಬಾರಿಗೆ ಇಲಾಖೆಯಿಂದ ಅನುಷ್ಟಾನಗೊಳಿಸಲಾಗುತ್ತಿದ್ದು ಯೋಜನೆಯನ್ನು ಶೀಘ್ರವಾಗಿ ಅನುಷ್ಟಾನಗೊಳಿಸುವ ನಿಟ್ಟನಲ್ಲಿ ಉಲ್ಲೇಖ (01)ರ ಸರ್ಕಾರಿ ಆದೇಶದ ಅನುಬಂಧ-02 ರ ಷರತ್ತು ಮತ್ತು ನಿಬಂದನೆಗಳಲ್ಲಿ ಕೆಲವೊಂದು ಮಾರ್ಪಾಡು ಮಾಡುವಂತೆ ಕೋರಿದ್ದು ಈ ಕೆಳಕಂಡಂತೆ ಕ್ರಮವಹಿಸಲು ಸೂಚಿಸಿದೆ.

| ಕ್ರ.ಸಂ | ಪ್ರಸ್ತುತವಾಗಿ ಚಾಲ್ತಿಯಲ್ಲಿರುವುದು | ಪರಿಷ್ಕರಿಸಬೇಕಾಗಿರುವುದು |
|---|---|---|
| 04 | ಕೆರೆಯ ಉಪಯುಕ್ತ ಜಲವಿಸ್ತೀರ್ಣಕ್ಕನುಗುಣವಾಗಿ ಪ್ರತಿ ಹೆಕ್ಟೇರ್ ಉಪಯುಕ್ತತಾ ಜಲವಿಸ್ತೀರ್ಣಕ್ಕೆ 4000 ಬಲಿತ ಬಿತ್ತನೆ ಮೀನುಮರಿಗಳಂತೆ ಗರಿಷ್ಠ ರೂ.10,000-00 ಮೌಲ್ಯದ ಬಲಿತ ಬಿತ್ತನೆ ಮೀನುಮರಿಗಳನ್ನು ಕೆರೆಗಳಿಗೆ ಬಿತ್ತನೆ ಮಾಡಲು ಅವಕಾಶ ಮಾಡಲಾಗಿದೆ. | ಸರ್ಕಾರದ ಆದೇಶ ಸಂಖ್ಯೆ: ಪಸಂಮೀ ಇ 124 ಮೀಇಇ 2021 ದಿನಾಂಕ: 21-10-2021 ರ ಪ್ಯಾರ 2 ರಲ್ಲಿ ಇಲಾಖಾ ಕೆರೆಗಳಿಗೆ ತಿಳಿಸಿರುವಂತೆ ಕೆರೆಗಳ ಜೈವಿಕ ಉತ್ಪಾದಕತೆ ಮತ್ತು ಮೀನು ಉತ್ಪಾದನಾ ಸಾಮರ್ಥ್ಯಕ್ಕನುಗುಣವಾಗಿ ಜಿಲ್ಲಾಮಟ್ಟದ ಅಧಿಕಾರಿಗಳು ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ |

| | | |
|---|---|---|
| | | ಸಮಾಲೋಚಿಸಿ ಗರಿಷ್ಟ ದಾಸ್ತಾನು ಮಿತಿಯನ್ನು ಪ್ರತಿ ಕೆರೆಗೆ ನಿರ್ಧರಿಸಲು ಅವಕಾಶ ನೀಡಲಾಗಿದೆ. ಆದರೆ ಪ್ರತಿ ಗ್ರಾಮ ಪಂಚಾಯಿತಿ ಕೆರೆಗೆ ಮೇಲಿನ ಸರ್ಕಾರದ ಆದೇಶದಲ್ಲಿ ತಿಳಿಸಿರುವಂತೆ ಗರಿಷ್ಟ ಮಿತಿ ರೂ.10000/- ಗಳನ್ನು ಮೀರತಕ್ಕದಲ್ಲ. |
| 05 | ಕಟ್ಲ ಮತ್ತು ಸಾಮಾನ್ಯಗೆಂಡೆ ಜಾತಿಯ ಮೀನುಮರಿಗಳನ್ನು ಶೇ 50:50 ರ ಅನುಪಾತದಲ್ಲಿ ದಾಸ್ತಾನು ಮಾಡತಕ್ಕದ್ದು. | ಒಂದು ವಲಯಕ್ಕೆ ಕೇಂದ್ರ ಕಛೇರಿಯಿಂದ ನೀಡಲಾಗಿರುವ ಸರಬರಾಜು ಆದೇಶದಲ್ಲಿನ ಮೀನುಮರಿಗಳ ಸಂಖ್ಯೆಗನುಗುಣವಾಗಿ ಕಟ್ಲಾ ಮತ್ತು ಸಾಮಾನ್ಯಗೆಂಡೆ ಜಾತಿಯ ಮೀನುಮರಿಗಳ ಅನುಪಾತವನ್ನುಜಂಟಿ ನಿರ್ದೇಶಕರ ಹಂತದಲ್ಲಿ ನಿರ್ಧರಿಸಿ ಒಂದು ಕೆರೆಗೆ ಗರಿಷ್ಟ ರೂ.10,000/- ಮೌಲ್ಯದ ಬಲಿತ ಬಿತ್ತನೆ ಮೀನುಮರಿಗಳನ್ನು ದಾಸ್ತಾನು ಮಾಡತಕ್ಕದ್ದು. |
| 11 | ಮೀನುಮರಿಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧ್ಯಕ್ಷರು/ ಸದಸ್ಯರು/ ಪಂಚಾಯಿತಿ ಅಭಿವೃದ್ದಿ ಅಧಿಕಾರಿಗಳು/ ಮೀನುಗಾರಿಕೆ ಸಹಾಯಕ ನಿರ್ದೇಶಕರು/ ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಗಳ ಸಮ್ಮುಖದಲ್ಲಿ ದಾಸ್ತಾನು ಮಾಡಿ, ದಾಸ್ತಾನು ಮಾಡುವ ಜಿ.ಪಿ.ಎಸ್. ಫೋಟೋ ವಿಡಿಯೋ ಚಿತ್ರೀಕರಣವನ್ನು ಕಡ್ಡಾಯವಾಗಿ ಒದಗಿಸತಕ್ಕದ್ದು. ಹಗಲು ಹೊತ್ತಿನಲ್ಲಿಯೇ ಮೀನು ಮರಿ ದಾಸ್ತಾನು ಮಾಡುವುದು. | ಮೀನುಮರಿಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧ್ಯಕ್ಷರು/ ಸದಸ್ಯರು/ ಪಂಚಾಯಿತಿ ಅಭಿವೃದ್ದಿ ಅಧಿಕಾರಿಗಳು/ ಮೀನುಗಾರಿಕೆ ಸಹಾಯಕ ನಿರ್ದೇಶಕರು/ ಸಮ್ಮುಖದಲ್ಲಿ ದಾಸ್ತಾನು ಮಾಡಿ, ದಾಸ್ತಾನು ಮಾಡುವ ಜಿ.ಪಿ.ಎಸ್. ಫೋಟೋ ವಿಡಿಯೋ ಚಿತ್ರೀಕರಣವನ್ನು ಕಡ್ಡಾಯವಾಗಿ ಒದಗಿಸತಕ್ಕದ್ದು. ಹಗಲು ಹೊತ್ತಿನಲ್ಲಿಯೇ ಮೀನು ಮರಿ ದಾಸ್ತಾನು ಮಾಡುವುದು.<br>ವಲಯ ಮಟ್ಟದ ಅಧಿಕಾರಿಗಳು ವಲಯದ ಶೇ.3 ರಿಂದ 5 ರಷ್ಟು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಜಿಲ್ಲೆಯ ಆಯ್ದ ಶೇ. 5 ರಿಂದ 10 ರಷ್ಟು ಕೆರೆಗಳಿಗೆ ಬೇಟಿ ನೀಡಿ ಮೀನುಮರಿ ದಾಸ್ತಾನು ಪ್ರಕ್ರಿಯೆಯನ್ನು ದೃಡಿಕರಿಸುವುದು . |

3/10/22

ಮೀನುಗಾರಿಕೆ ನಿರ್ದೇಶಕರು